**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.302/2022

**PW**. 9

**CW**. 15

**ಸಾಕ್ಷಿಯ ಹೆಸರು –ಬಿ ಆರ್ ರವಿಕುಮಾರ**

**ತಂದೆಯ ಹೆಸರು –ರಾಮೇಗೌಡ**

**ವಯಸ್ಸು –48 ವರ್ಷಗಳು** ದಿನಾಂಕ 19–01–2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಹೆಚ್ ಸಿ , ಕೆ ಆರ್ ನಗರ ಪೊಲೀಸ್ ಠಾಣೆ**

**ವಾಸಸ್ಥಳ –ಕೆ ಆರ್ ನಗರ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ಜುಲೈ 2019 ರಿಂದ ಜುಲೈ 2024 ರವರೆಗೆ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಸೇವೆ ಸಲ್ಲಿಸಿರುತ್ತೇನೆ.

ದಿಃ 11–04–2021 ರಂದು ನಮ್ಮ ಠಾಣೆಯ ಪಿ ಐ ಜಗದೀಶರವರ ಮೌಖಿಕ ಆದೇಶದ ಮೇರೆಗೆ ಮಧ್ಯಾಹ್ನ 12.10 ಗಂಟೆ ರಿಂದ 1.20 ರವರೆಗೆ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಹದೇವರವರ ಹೇಳಿಕೆಯನ್ನು ದಾಖಲು ಮಾಡಿಕೊಂಡು ಠಾಣೆಗೆ ಬಂದು, ನಮ್ಮ ಠಾಣಾ ಮೊ ಸಂ 100/2021 ರಂತೆ ಪ್ರಕರಣ ದಾಖಲು ಮಾಡಿಕೊಂಡು ಪ್ರ ವ ವ ಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ. ಸದರಿ ಹೇಳಿಕೆಯನ್ನು ಈಗಾಗಲೇ ನಿಪಿ–1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಪ್ರ ವ ವ ಯನ್ನು ನಿಪಿ–10 ಎಂದು ಸಾಕ್ಷಿಯ ಸಹಿಯನ್ನು ನಿಪಿ–10(ಎ) ಎಂದು ಗುರುತಿಸಲಾಯಿತು.

ಅದೇದಿನ ಸಂಜೆ 4.30 ರಿಂದ 6.00 ಗಂಟೆವರೆಗೆ ಚಾಸಾ–7 ಮತ್ತು 8 ರವರು ಸ್ಥಳ ತೋರಿಸಿದ ಮೇರೆಗೆ ಅವರ ಸಮಕ್ಷಮ ಪಂಚನಾಮೆ ಮಾಡಿ, ಒಂದು ಮರದ ಹಿಡಿಕೆಯಿರುವ ಕಬ್ಬಿಣದ ಮಚ್ಚು , ನಾಲ್ಕು ಮರದ ದೊಣ್ಣೆ , ಗಾಯಾಳುವಿನ ರಕ್ತಕಲೆಯಿರುವ ಶರ್ಟ , ಒಂದು ಲುಂಗಿ ,ಚಾಸಾ–2 ರವರ ಒಂದು ರಕ್ತಕಲೆಯಿರುವ ಶರ್ಟ, ಒಂದು ಪ್ಯಾಂಟ್ ಗಳನ್ನು ಜಪ್ತಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ–2(ಡಿ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ವಸ್ತುಗಳನ್ನು ಈಗಾಗಲೇ ಮು.ಮಾ–1 ರಿಂದ 9 ಎಂದು ಗುರುತಿಸಲಾಗಿದೆ.

ದಿಃ 18–04–2021 ರಂದು ಕೃತ್ಯ ನಡೆದ ಸ್ಥಳದ ನಕ್ಷೆ ಕೋರಿ ಪಿಡಬ್ಲ್ಯೂಡಿ ಇಲಾಖೆಗೆ ಮನವಿ ಸಲ್ಲಿಸಿದ್ದೇನೆ. ಅದೇ ದಿನ ಕೃತ್ಯ ನಡೆದ ಸ್ಥಳದ ದಾಖಲೆ ಕೋರಿ ಪಿಡಿಓ ರವರಿಗೆ ಮನವಿ ಸಲ್ಲಿಸಿದ್ದೇನೆ. ನಂತರ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ–16 ರವರಿಗೆ ವಹಿಸಿರುತ್ತೇನೆ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ–**

ನಾನು ಚಾಸಾ–1 ರವರ ಹೇಳಿಕೆ ದಾಖಲು ಮಾಡಿಕೊಳ್ಳಲು ಆಸ್ಪತ್ರೆಗೆ ಹೋಗಿದ್ದಾಗ ಈ ಪ್ರಕರಣದ 5 ಮತ್ತು 6 ನೇ ಆರೋಪಿತರು ಗಾಯಗೊಂಡು ಅದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಕೃತ್ಯ ನಡೆದ ಸ್ಥಳ 5 ನೇ ಆರೋಪಿಯ ಮನೆ ಹಿಂಭಾಗ ಎಂದರೆ ಸರಿ. ಚಾಸಾ–1 ರವರ ಮನೆಗೆ ಹಾಗೂ ಕೃತ್ಯ ನಡೆದ ಸ್ಥಳಕ್ಕೆ ಅರ್ಧ ಕಿ ಮೀ ಅಂತರವಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–1 ರ ಎರಡನೇ ಪುಟದಲ್ಲಿ 8 ಸಾಲು ಮುಗಿದ ನಂತರ 1 ಸಾಲನ್ನು ಸೇರಿಸಲಾಗಿದೆ ಎಂದರೆ ಸರಿ. ಕೃತ್ಯ ನಡೆದ ಸ್ಥಳ ಬದಲಾವಣೆ ಮಾಡಲು ಸದರಿ ಸಾಲನ್ನು ಸೇರಿಸಲಾಗಿದೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ಅಕ್ಕಪಕ್ಕದ ಮನೆಯ ವಾಸಿಗಳ ಹೇಳಿಕೆಗಳನ್ನು ನಾನು ಬರೆದುಕೊಂಡಿಲ್ಲ ಎಂದರೆ ಸರಿ .

ಚಾಸಾ–7 ಮತ್ತು 8 ಪ್ರತ್ಯಕ್ಷ ಸಾಕ್ಷಿದಾರರಲ್ಲ ಎಂದರೆ ಸರಿ . ಚಾಸಾ–7 ಮತ್ತು 8 ರವರ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಜಪ್ತಿ ಮಾಡಿದ ಮಚ್ಚು ಮತ್ತು ದೊಣ್ಣೆಗಳು ಆರೋಪಿತರಿಗೆ ಸಂಬಂಧಪಟ್ಟ ವಸ್ತುಗಳಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಚಾಸಾ–1 ಮತ್ತು ಅವರ ಕುಟುಂಬದವರು 5 ಮತ್ತು 6 ನೇ ಆರೋಪಿತರಿಗೆ ಹಲ್ಲೆ ಮಾಡಿದ ವಿಚಾರ ತನಿಖೆ ಸಮಯದಲ್ಲಿ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಮಾಡದಿದ್ದರೂ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.